"ರೋಜ್‌ಗಾರ್ ಯೋಜನೆಯಡಿ ಸಾಲ"

4639 (5360) : ಶ್ರೀ ಹೆಚ್.ಎಸ್. ಶಂಕರಲಿಂಗೇಗೌಡ (ಚಾಮರಾಜ) ಮಾನ್ಯ ಸಣ್ಣ ಕೈಗಾರಿಕೆ ಹಾಗೂ ಹಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಕಳೆದ ಮೂರು ವರ್ಷಗಳಲ್ಲಿ ಯಾವಯಾವ ಉದ್ದೇಶಕ್ಕೆ ಎಷ್ಟೆಷ್ಟು ಮಂದಿ ನಿರುದ್ಯೋಗಿಗಳು ಎಷ್ಟೆಷ್ಟು ಪ್ರಮಾಣದಲ್ಲಿ ರೋಜಗಾರ್ ಯೋಜನೆಯಡಿ ಸಾಲ ಪಡೆದಿರುವರು;

ಆ) ಅವುಗಳಲ್ಲಿ ಮರು ಪಾವತಿಯಾಗಿರುವ ಸಂಖ್ಯೆ ಎಷ್ಟು? ಇನ್ನೂ ಪಾವತಿ ಆಗಬೇಕಿರುವ ಸಂಖ್ಯೆ ಎಷ್ಟು?

ಇ) ರೋಷನ್ ಯೋಜನೆಯಡಿ ಸಾಲದ ಮೊತ್ತ ಹೆಚ್ಚಿಸುವ ಬಗ್ಗೆ ಸರ್ಕಾರದ ನಿಲುವೇನು?

ಶ್ರೀ ಆರ್. ರೋಷನ್‌ಬೇಗ್ (ಸಣ್ಣ ಕೈಗಾರಿಕೆ ಹಾಗೂ ಹಜ್ ಸಚಿವರು)

ಅ) ಪ್ರಧಾನಮಂತ್ರಿಗಳ ರೋಜ್ಗಾರ್ ಯೋಜನೆಯಡಿ ಕಳೆದ ಮೂರು ವರ್ಷಗಳಲ್ಲಿ ಒಟ್ಟು 52,155 ಫಲಾನುಭವಿಗಳಿಗೆ ರೂ. 299929.77 ಲಕ್ಷಗಳಷ್ಟು ಸಾಲ ಮಂಜೂರಾತಿಯಾಗಿದ್ದು, ಇದರಲ್ಲಿ ಒಟ್ಟು 38829 ಮಂದಿ ರೂ. 22274.58 ಲಕ್ಷಗಳಷ್ಟು ಸಾಲ ಪಡೆದಿರುತ್ತಾರೆ. 2002–03ನೇ ಸಾಲಿನ ಸಾಲ ಬಿಡುಗಡೆಯ ಪ್ರಕ್ರಿಯೆಯು ಮುಂದುವರೆಯುತ್ತಿದ್ದು, ಸೆಪ್ಟೆಂಬರ್ 2003ರ ಅಂತ್ಯಕ್ಕೆ ಕೊನೆಗೊಳ್ಳಲಿದೆ. ಸಾಲ ಮಂಜೂರಾದ ವಿವರಗಳು ಈ ಕೆಳಕಂಡಂತಿವೆ:

ಕ್ರ. ಸಂ.	ವರ್ಷ	ಕೈಗಾರಿಕೆ		ಸೇವಾ		ವ್ಯಾಪಾರ		ಅಗ್ರೋ ಮತ್ತು ಇತರೆ	
		ಸಂಖ್ಯೆ	ಮೊತ್ತ	ಸಂಖ್ಯೆ	ಮೊತ್ತ	ಸಂಖ್ಯೆ	ಮೊತ್ತ	ಸಂಖ್ಯೆ	ಮೊತ್ತ
1.	00–01	3595	2450.53	5453	3311.07	9218	5095.99	779	334.06
2.	01–02	2657	1725.76	4712	2840.23	8839	4908.53	642	260.38
3.	02–03	2580	1623.86	4767	2788.26	8212	4199.83	699	391.27
	ಒಟ್ಟು	**8832**	**5800.15**	**14932**	**8939.56**	**26269**	**14204.35**	**2116**	**985.71**

ಯೋಜನೆಯಡಿ ಸಾಲ ನೀಡುವ ಬ್ಯಾಂಕುಗಳ ಇತ್ತೀಚಿನ ಡಿಮ್ಯಾಂಡ್ ಕಲೆಕ್ಷನ್ ಬ್ಯಾಲೆನ್ಸ್ ಪ್ರಕಾರ ಪ್ರಧಾನ ಮಂತ್ರಿಗಳ ರೋಜ್‌ಗಾರ್ ಯೋಜನೆಯಡಿ ಶೇ. 30ರಷ್ಟು ಮಾತ್ರ ಸಾಲ ಮರುಪಾವತಿಯಾಗುತ್ತಿದ್ದು, ಇನ್ನು ಶೇ. 70 ರಷ್ಟು ಮರುಪಾವತಿಯಾಗಬೇಕಾಗಿರುತ್ತದೆ.

ಇ) ಈ ಯೋಜನೆಯಡಿ ಮಂಜೂರು ಮಾಡುವ ಸಾಲದ ಮೊತ್ತವನ್ನು ಕೇಂದ್ರ ಸರ್ಕಾರವು ರೂ. 1.00 ಲಕ್ಷ ಯೋಜನಾ ವೆಚ್ಚದಿಂದ ರೂ. 2.00 ಲಕ್ಷಗಳವರೆಗೆ ಈಗಾಗಲೇ ಒಂದು ಬಾರಿ ಹೆಚ್ಚಿಸಲಾಗಿದೆ. ಈ ಯೋಜನೆಯು ಕೇಂದ್ರ ಸರ್ಕಾರದ ಯೋಜನೆಯಾಗಿದ್ದು, ಕೇಂದ್ರ ಸರ್ಕಾರದ ಮಾರ್ಗಸೂಚಿಯಂತೆ ಅನುಷ್ಠಾನಗೊಳಿಸಲಾಗುತ್ತಿದೆ.

ರಾಜ್ಯದಲ್ಲಿ "ಅಕ್ರಮ ಗಣಿಗಾರಿಕೆ"

4640 (5361) : ಶ್ರೀ ಹೆಚ್.ಎಸ್. ಶಂಕರಲಿಂಗೇಗೌಡ (ಚಾಮರಾಜ) ಮಾನ್ಯ ಗಣಿ ಮತ್ತು ಭೂವಿಜ್ಞಾನ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಜ್ಯದಾದ್ಯಂತ ಎಲ್ಲೆಲ್ಲಿ, ಯಾರು ಯಾರಿಗೆ ಗಣಿಗಾರಿಕೆಗೆ ಅನುಮತಿ ನೀಡಲಾಗಿದೆ.